**ದಿನಾಂಕ: 27-10-2025ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಎಸ್.ಎಲ್.ಕೆ. ವಕೀಲರಿಂದ**

1. ಈ ದಾವೆಯನ್ನು ಹಾಕುವ ಸಮಯದಲ್ಲಿ ನನ್ನ ವಯಸ್ಸು 50 ರಿಂದ 60 ವರ್ಷ ಎಂದು ಉತ್ತರಿಸುತ್ತಾರೆ. ಈ ದಾವೆಯನ್ನು ಹಾಕುವ ಸಮಯದಲ್ಲಿ ನಿಮ್ಮ ವಯಸ್ಸು 55 ವರ್ಷ ಎಂದು ಬರೆದಿದ್ದೀರಿ ಎಂದರೆ ಸರಿ. ನಿಮ್ಮ ಮದುವೆಯಾಗಿ ಎಷ್ಟು ವರ್ಷವಾಗಿದೆ ಎಂದರೆ ನನಗೆ 12 ವರ್ಷ ವಯಸ್ಸು ಇದ್ದಾಗ ಮದುವೆ ಆಗಿರುತ್ತದೆ. ನಿಮ್ಮ ತಂದೆ ಹೆಸರು ಬಸಪ್ಪ, ಬಸಪ್ಪನ ತಂದೆಯ ಹೆಸರು ಸುಬ್ಬರಾಯ ಎಂದರೆ ಸರಿ. ಬಸಪ್ಪನಿಗೆ ಎಷ್ಟು ಜನ ಹೆಂಡತಿಯರು ಎಂದರೆ ಇಬ್ಬರು ಹೆಂಡತಿಯರು. ನಿಮ್ಮ ತಾಯಿ ಹೆಸರು ಚನ್ನಮ್ಮ ಎಂದರೆ ಸರಿ. ನಿಮ್ಮ ತಂದೆಯ ಇನ್ನೊಬ್ಬ ಹೆಂಡತಿ ಹೆಸರು ಬಸಮ್ಮ ಎಂದರೆ ಸರಿ. ನಿಮ್ಮ ತಾಯಿ ಚನ್ನಮ್ಮಳಿಗೆ ಬಾಪುಗೌಡ, ಸಂಗನಗೌಡ ಮತ್ತು ನೀವು ಮಕ್ಕಳು ಎಂದರೆ ಸರಿ. ಬಸಮ್ಮಳ ಮಕ್ಕಳು ಎಂದರೆ ಅನ್ನಪೂರ್ಣ ಮತ್ತು ಪ್ರಭಾವತಿ ಎಂದರೆ ಸರಿ. ನಿಮ್ಮ ತಂದೆ ಬಸಪ್ಪನ ಹೆಸರಿನಲ್ಲಿ ಎಷ್ಟು ಹೊಲಗಳು ಇವೆ ಎಂದರೆ 13 ಕೂರಿಗೆ ಮೇಲೆ ಕೇಸ್ ಹಾಕಿರುತ್ತೇನೆ ಎಂದು ಉತ್ತರಿಸುತ್ತಾರೆ. ಒಂದು ಕೂರಿಗೆಗೆ ಎಷ್ಟು ಎಕರೆ ಎಂದರೆ 4 ಎಕರೆ ಎಂದು ಉತ್ತರಿಸುತ್ತಾರೆ. ಯಾವ ಹೊಲಗಳು ಮತ್ತು ಅವುಗಳ ಸರ್ವೆ ನಂಬರ್ ಹೇಳಲು ಬರುತ್ತಾ ಎಂದರೆ ಸರ್ವೆ ನಂಬರ್ ಹೇಳಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ.

2. ಬಸಪ್ಪನಿಗೆ ಬಂದಂತಹ ಆಸ್ತಿಗಳೆಂದರೆ 6 ಹೊಲಗಳು ಎಂದರೆ ಸರಿ. 6 ಹೊಲಗಳು ಯಾರ ಯಾರ ಹೆಸರಿನಲ್ಲಿ ಇವೆ ಎಂದರೆ ನಮ್ಮ ಅಪ್ಪನ ಹೆಸರಿಗೆ ಇರುವುದು ಸರಿ. ಆಸ್ತಿಗಳು ಮಾಡಿರುವುದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 6 ಸರ್ವೆ ನಂಬರುಗಳು ಒಟ್ಟು ಪಾಲು ಆಗಿಲ್ಲ ನಮ್ಮ ತಂದೆಯ ಹೆಸರಿನಲ್ಲಿ ಯಾವ ರೀತಿ ಇತ್ತು ಅದೇ ರೀತಿ ಇರುತ್ತದೆ. ನಿಮ್ಮ ತಂದೆ ಬಸಪ್ಪ ನಿಮ್ಮ ಅಣ್ಣ ಬಾಪುಗೌಡ ಮತ್ತು ತಮ್ಮನಾದ ಸಂಗನಗೌಡ ಇವರು ದಿನಾಂಕ 06-01-1976 ರಲ್ಲಿ ರಿಜಿಸ್ಟರ್ ಪಾಲು ಆಗಿದ್ದಾರೆ ಎಂದರೆ ಪಾಲು

ಆಗಿಯೇ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ನಿಮ್ಮ ಅಣ್ಣ ಮತ್ತು ತಮ್ಮ ದಿನಾಂಕ 06-01-1976 ರಲ್ಲಿ 542/1975-76 ರಂತೆ ರಿಜಿಸ್ಟರ್ ಪಾಲು ಆಗಿದ್ದಾರೆ ಎಂದರೆ ಪಾಲು ಆಗಿಲ್ಲ ಆಯಿ ಮುತ್ಯ ನಮಗೆ ಜೋಪಾನ ಮಾಡಿದ್ದಾರೆ ಅವರು ಸುಳ್ಳು ಬರೆಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಆ ಪಾಲಿನಲ್ಲಿ ಸ.ನಂ.29/1 ರಲ್ಲಿ 7 ಎಕರೆ 21 ಗುಂಟೆ, ಸ.ನಂ.33 ರಲ್ಲಿ 6 ಎಕರೆ 35 ಗುಂಟೆ ನಿಮ್ಮ ತಂದೆಯ ಪಾಲಿಗೆ ರಿಜಿಸ್ಟರ್ ಮೂಲಕ ಬಂದಿದೆ ಎಂದರೆ ಒಟ್ಟು ಪಾಲು ಆಗಿಯೇ ಇಲ್ಲ ಇದು ಸುಳ್ಳು ಎಂದು ಉತ್ತರಿಸುತ್ತಾರೆ. ಪಾಲು ಆಗುವ ಸಮಯದಲ್ಲಿ ಸಂಗನಗೌಡ ತೀರಿಕೊಂಡಿದ್ದರು ಅವರ ಮಗ ಬಸವರಾಜ (3ನೇ ಪ್ರತಿವಾದಿ) ಇವರಿಗೆ 1976 ರಲ್ಲಿ ಆದಂತಹ ಪಾಲಿನಲ್ಲಿ ಸ.ನಂ.2/ಬಿ ರಲ್ಲಿ 10 ಎಕರೆ 14 ಗುಂಟೆ, ಸ.ನಂ.10/ಎ ರಲ್ಲಿ 10 ಎಕರೆ 32 ಗುಂಟೆ, ಸ.ನಂ.15/ಬಿ ರಲ್ಲಿ 3 ಎಕರೆ 22 ಗುಂಟೆ, ಸ.ನಂ.38/ಎ ರಲ್ಲಿ 9 ಎಕರೆ 1 ಗುಂಟೆ ಬಂದಿದೆ ಎಂದರೆ ನಮಗೆ ಗೊತ್ತಿಲ್ಲ ನಮ್ಮ ಸಹಿ ಇಲ್ಲ ಎಂದು ಉತ್ತರಿಸುತ್ತಾರೆ.

3. ನಿಮ್ಮ ತಂದೆ ಬಸಪ್ಪಗೌಡ ಪಾಲು ಆದ ಮೇಲೆ ಸ.ನಂ.29/1 ರಲ್ಲಿ 7 ಎಕರೆ 21 ಗುಂಟೆ, ಸ.ನಂ.33 ರಲ್ಲಿ 6 ಎಕರೆ 35 ಗುಂಟೆ ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡು 1982ವರೆಗೆ ತಾನೇ ಸಾಗುವಳಿ ಮಾಡುತ್ತಿದ್ದರು ಎಂದರೆ ನನ್ನ ಗಂಡ ಜಗಳ ಆಡಿ ನನಗೆ ಬಿಟ್ಟಿದ್ದನು ನಾನೇ ಉಂಡಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡ ಬಿಟ್ಟ ಮೇಲೆ ತವರು ಮನೆಯಲ್ಲೇ ಇದ್ದೀರಾ ಎಂದರೆ ನಾನು ನನ್ನ ಸೋದರತ್ತೆ ಮನೆಯಲ್ಲಿ ಇದ್ದೆನು ಎಂದು ಉತ್ತರಿಸುತ್ತಾರೆ. ಆಸ್ತಿ ಇದ್ದ ಅದೇ ಊರಿನಲ್ಲಿಯೇ ಇದ್ದೆನು. ನನ್ನ ಗಂಡನ ಊರು ಬನ್ನಟ್ಟಿ ಇರುತ್ತದೆ. ನಿಮ್ಮ ತಂದೆಯು ಸ.ನಂ.29/1 ರಲ್ಲಿ 7 ಎಕರೆ 21 ಗುಂಟೆ, ಸ.ನಂ.33 ರಲ್ಲಿ 6 ಎಕರೆ 35 ಗುಂಟೆ ಜಮೀನಿನಲ್ಲಿ 1982 ವರೆಗೆ ಸಾಗುವಳಿ ಮಾಡಿದ ನಂತರ ತನ್ನ 2ನೇ ಹೆಂಡತಿಯಾದ ಬಸಮ್ಮಳ ಇಬ್ಬರು ಮಕ್ಕಳಾದ ಅನ್ನಪೂರ್ಣಾ ಮತ್ತು ಪ್ರಭಾವತಿಗೆ ಮುಟೇಷನ್ ಮಾಡಿ ಅವರ ಹೆಸರಿಗೆ 1982 ರಲ್ಲಿ ಕೊಟ್ಟಿರುತ್ತಾನೆ ಎಂದರೆ ನಮಗೆ

ಗೊತ್ತಾಗಿಲ್ಲ ಅವರ ಹೆಸರಿಗೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಅವರ ಹೆಸರಿಗೆ ಮುಟೇಷನ್ ನಂ.5 ರಂತೆ ದಿನಾಂಕ 26-11-2008 ರಂದು ಮಾಡಿದ್ದಾರೆ ಎಂದರೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಅವಾಗಿನಿಂದ ಪ್ರಭಾವತಿಗೆ ಸ.ನಂ.29/1 ವರ್ಗಾವಣೆ ಆಯಿತು ಅನ್ನಪೂರ್ಣಾಗೆ ಸ.ನಂ.33 ವರ್ಗಾವಣೆ ಆಯಿತು ಎಂದರೆ ಇಲ್ಲ ಎಂದು ಉತ್ತರಿಸಿ ಕೊಟ್ಟೇ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಕೊಟ್ಟಿದ್ದ ದಿನಾಂಕದಿಂದ ಸದರಿ ಜಮೀನುಗಳಿಗೆ ಅವರೇ ಸಾಗುವಳಿ ಮಾಡುತ್ತಿದ್ದಾರೆ ಮತ್ತು ಅವರವರ ಹೆಸರಿನಲ್ಲಿ ಇಲ್ಲಿಯವರೆಗೂ ಇದೆ ಎಂದರೆ ಅವರ ಹೆಸರಿನಲ್ಲಿ ಮಾಡಿಲ್ಲ ಎಂದು ಉತ್ತರಿಸುತ್ತಾರೆ.

4. ಬಾಪುಗೌಡ ಮತ್ತು ಸಂಗನಗೌಡನ ಮಕ್ಕಳು ಬೇರೆಯಾಗಿ 2 ಸರ್ವೆ ನಂಬರುಗಳು ಬಾಪುಗೌಡನಿಗೆ ಮತ್ತು 2 ಸರ್ವೆ ನಂಬರುಗಳು ಸಂಗನಗೌಡನ ಮಕ್ಕಳಿಗೆ ಬಂದಿವೆ ಎಂದರೆ ಏನೂ ಪಾಲು ಆಗಿಲ್ಲ ನಮಗೆ ಪಾಲು ಬೇಕು ಎಂದು ಉತ್ತರಿಸುತ್ತಾರೆ. ನೀವು ಹಾಕಿದಂತಹ ದಾಖಲೆಗಳು ಯಾರ ಯಾರ ಹೆಸರಿನಲ್ಲಿ ಇವೆ ಎಂದು ಮಾಹಿತಿ ಪಡೆದುಕೊಂಡಿದ್ದೀರಾ ಎಂದರೆ ಕಾಗದ ಪತ್ರ ನೋಡಿಲ್ಲ ನಾವು ಕಲಿತವರು ಅಲ್ಲ ಎಂದು ಉತ್ತರಿಸುತ್ತಾರೆ. ವರ್ಗಾವಣೆ ನಂ.2 ರಂತೆ ದಿನಾಂಕ 31-08-1982ರಲ್ಲಿ ಬಾಪುಗೌಡ ಮತ್ತು ಸಂಗನಗೌಡರವರಿಗೆ ಆಗಿದೆ ಎಂದರೆ ನಮಗೂ ಬೇಕು ನಾವು ಸಹಿ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಅಣ್ಣ ಮತ್ತು ತಮ್ಮ ಮುಟೇಷನ್ ನಂ.16 ರಂತೆ ದಿನಾಂಕ 05-05-1994 ರಂದು ಪಾಲು ಆದರು ಎಂದರೆ ಯಾರಿಗೂ ಪಾಲು ಆಗಿಲ್ಲ ನಮಗೆ ಎಷ್ಟು ಸಿಗಬೇಕು ಅಷ್ಟು ಪಾಲು ಕೊಡಿಸಬೇಕು ಎಂದು ಉತ್ತರಿಸುತ್ತಾರೆ. ನೀವು ಹಾಕಿದಂತಹ ದಾಖಲೆಯಲ್ಲಿ ಸ.ನಂ.2 ರಲ್ಲಿ 10 ಎಕರೆ 16 ಗುಂಟೆ, ಸ.ನಂ.15ರಲ್ಲಿ 3 ಎಕರೆ 19 ಗುಂಟೆ ಬಾಪುಗೌಡನ ಪಾಲಿಗೆ ಬಂದಿದೆ ಎಂದರೆ ಅವರು ಏನೂ ನನಗೆ ಕೇಳಿಲ್ಲ ಅವರು ಮಾತನಾಡಿಸಿಲ್ಲ ಈಗ ನನಗೆ ಪಾಲು ಬೇಕು ಎಂದು ಉತ್ತರಿಸುತ್ತಾರೆ. ಪಾಲಿನ ಪ್ರಕಾರ ಸ.ನಂ.38/1 ಮತ್ತು 10/1 ರ ಹೊಲಗಳು ಸಂಗನಗೌಡನ ಪಾಲಿಗೆ ಬಂದಿದೆ ಎಂದರೆ ಪಾಲು ಮಾಡಿಲ್ಲ ನನ್ನ ಸಹಿ

ಪಡೆದಿಲ್ಲ ನನಗೆ ಬರಬೇಕಾದ ಆಸ್ತಿ ಕೊಡಿಸಬೇಕು ಎಂದು ಉತ್ತರಿಸುತ್ತಾರೆ. 1976 ರಲ್ಲಿ ನಿಮ್ಮ ತಂದೆ, ನಿಮ್ಮ ಅಣ್ಣ ಮತ್ತು ತಮ್ಮ ಪಾಲು ಆದಾಗ ನಿಮ್ಮ ವಯಸ್ಸು 12 ವರ್ಷ ವಯಸ್ಸು ಇತ್ತು ಎಂದರೆ ಸಣ್ಣಕ್ಕಿ ಇದ್ದೆನು ಎಂದು ಉತ್ತರಿಸುತ್ತಾರೆ. ನೀವು ಊರಿನಲ್ಲಿ ಇದ್ದೀರಿ ನಿಮ್ಮ ಅಣ್ಣ, ತಮ್ಮ ಮತ್ತು ನಿಮ್ಮ ತಂದೆಯ 2ನೇ ಹೆಂಡತಿಯ ಮಕ್ಕಳ ಹತ್ತಿರ ಹೋಗಿ ಬಂದು ಮಾಡುತ್ತಿದ್ದೀರಿ ಎಂದರೆ ಹೋಗಿಲ್ಲ ಎಂದು ಉತ್ತರಿಸುತ್ತಾರೆ.

5. ನಿಮ್ಮ ವಯಸ್ಸು 18-19 ಆದ ನಂತರ ನೀವು ಪಾಲು ಬೇಕು ಎಂದು ದಾವೆ ಮಾಡಬೇಕಾಗಿತ್ತು ಆದರೆ ಮಾಡಿಲ್ಲ ಎಂದರೆ ನನ್ನ ಮಗ ದೊಡ್ಡವನಾದ ನಂತರ ಅದರ ಬಗ್ಗೆ ವಿಚಾರ ಮಾಡಿ ಈಗ ದಾವೆ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನೀವು ಪ್ರಾಪ್ತ ವಯಸ್ಸು ಆದ 3 ವರ್ಷಗಳ ಒಳಗೆ ಮತ್ತೊಮ್ಮೆ ಪಾಲು ಆಗಬೇಕಿತ್ತು ನೀವು ದಾವೆ ಹಾಕಿಲ್ಲ ಎಂದರೆ ಹಾಕಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ, ಅಣ್ಣ ಮತ್ತು ತಮ್ಮ 1976 ರಲ್ಲಿ ಭಾಗ ಆಗಿದ್ದರಿಂದ ಅದರಲ್ಲಿ ನಿಮಗೆ ಯಾವುದೇ ಭಾಗ ಬರುವುದಿಲ್ಲ ಎಂದರೆ ನಾನು ಸಹಿ ಮಾಡಿಲ್ಲ ಆಸ್ತಿ ಬೇಕು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಪಾಲಿಗೆ ಬಂದಂತಹ ಆಸ್ತಿಯನ್ನು ಅನ್ನಪೂರ್ಣಾ ಮತ್ತು ಪ್ರಭಾವತಿಗೆ ಕೊಟ್ಟಿದ್ದರಿಂದ ಅವರೇ ಸದರಿ ಆಸ್ತಿಗೆ ಸಂಪೂರ್ಣ ಮಾಲೀಕರು ಎಂದರೆ ನನ್ನ ಅಣ್ಣ ತಮ್ಮಂದಿರ ಆಸ್ತಿಯಲ್ಲಿ ಪಾಲು ಬೇಕು ಒಟ್ಟು ಆಸ್ತಿಯಲ್ಲಿ ಪಾಲು ಆಗಿಲ್ಲ ಆಸ್ತಿ ಬೇಕು ಎಂದು ಉತ್ತರಿಸುತ್ತಾರೆ. ಬಾಪುಗೌಡ ಮತ್ತು ಸಂಗನಗೌಡನ ಪಾಲಿಗೆ ಬಂದಂತಹ ಆಸ್ತಿಗಳು ಅವರ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಇರುವುದರಿಂದ ಸದರಿ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಹಕ್ಕು ಇದೆ ಎಂದು ಉತ್ತರಿಸುತ್ತಾರೆ. ಸದರಿ ಪಾಲು ಮಾಡಿಕೊಂಡಿರುವ ವಿಷಯ 30 ವರ್ಷಗಳ ಹಿಂದೆ ನಿಮಗೆ ಗೊತ್ತಿದ್ದರೂ ಸಹ ಇಲ್ಲಿಯವರೆಗೆ ದಾವೆ ಮಾಡಿಲ್ಲ ಎಂದರೆ ನನಗೆ ಪಾಲು ಬೇಕು ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕು ಪಾಲು

ಬರುವುದಿಲ್ಲ ಅಳತೆ ಮತ್ತು ಗಡಿ ಗುರುತಿನ ಮೇಲೆ ಪಾಲು ಆಗಿದೆ ಎಂದರೆ ಪಾಲು ಆಗಿಲ್ಲ ನನಗೆ ಆಸ್ತಿ ಬೇಕು ಎಂದು ಉತ್ತರಿಸುತ್ತಾರೆ. ನೀವು ಹಾಕಿದಂತಹ ದಾಖಲೆಗಳ ಪ್ರಕಾರ ಪಾಲಿನ ಪ್ರಕಾರ ವರ್ಗಾವಣೆ ಆಗಿದೆ ಎಂದರೆ ಸುಳ್ಳು ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಈಗಾಗಲೇ 1976 ರಲ್ಲಿ ಪಾಲು ಆಗಿದ್ದರಿಂದ ನಿಮಗೆ ಪಾಲು ಕೇಳಲು ಯಾವುದೇ ಹಕ್ಕು ಇಲ್ಲ ಎಂದರೆ ನನಗೆ ಪಾಲು ಬೇಕು ಎಂದು ಉತ್ತರಿಸುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ